ಬೆಂಗಳೂರು ಲಕ್ಷಸಂದ್ರ ಮೊದಲನೇ ಮುಖ್ಯ ರಸ್ತೆ ಹಾಗೂ ಸುಣ್ಣಕಲ್ ಪಾರ್ಮಾರಸ್ತೆ ಮಧ್ಯ ಗೃಹ ನಿರ್ಮಾಣ ಮಂಡಳಿಯ ವಿಸ್ತೀರ್ಣ.

885 - ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಕ್ಷಸಂದ್ರ ಮೊದಲನೇ ಮುಖ್ಯರಸ್ತೆ ಹಾಗೂ ಸುಣ್ಣಕಲ್ ಫಾರ್ಮ್‌ರಸ್ತೆ (ಬಿ.ಟಿ.ಎಸ್) ರಸ್ತೆ ಮಧ್ಯೆ ಇರುವ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಜಮೀನಿನ ವಿಸ್ತೀರ್ಣವೆಷ್ಟು?

ಆ) ಈ ಮೇಲ್ಕಂಡ ಗೃಹ ನಿರ್ಮಾಣ ಮಂಡಳಿಯ ಜಮೀನಿನಲ್ಲಿ ಕಾಂಪೌಂಡ್ ಹಾಕಿಕೊಂಡು ಖಾಸಗಿ ವ್ಯಕ್ತಿಗಳು ಅನಧಿಕೃತ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಈ ರೀತಿ ಅನಧಿಕೃತ ನಿರ್ಮಾಣಕ್ಕೆ ಕಾರಣರಾರು?

ಈ) ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಗೃಹ ನಿರ್ಮಾಣ ಮಂಡಳಿಯ ಮನೆಗಳನ್ನು ಕಟ್ಟತಕ್ಕ ಯಾವುದಾದರೂ ಯೋಜನೆ ಇದೆಯೇ?

ಉ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಜಮೀನಿನ ವಿಸ್ತೀರ್ಣ 6,386.67 ಚ.ಗಜಗಳು.

ಆ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದ 6386.87 ಚ.ಗಜಗಳ ಈ ಜಾಗದಲ್ಲಿ 46 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ್ದು, ಪೂರ್ಣ ವಿಸ್ತೀರ್ಣವನ್ನು ಉಪಯೋಗಿಸಿಕೊಳ್ಳಲಾಗಿದೆ. ಆದ್ದರಿಂದ ಕರ್ನಾಟಕ ಗೃಹ ಮಂಡಳಿಯ ಜಾಗದಲ್ಲಿ ಅನಧಿಕೃತ ನಿರ್ಮಾಣ ಕಾರ್ಯ ಉದ್ಭವಿಸುವುದಿಲ್ಲ.

ಇ) (ಆಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ)

ಈ) ಕರ್ನಾಟಕ ಗೃಹ ಮಂಡಳಿಯು ಮೇಲ್ಕಂಡ ವಿಸ್ತೀರ್ಣವನ್ನು ಪೂರ್ಣ ಉಪಯೋಗಿಸಿಕೆರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳ ನಿರ್ಮಾಣದ ಕುರಿತು

889-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ರಾಜ್ಯದ ಯಾವ ಯಾವ ನಗರಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ಇತರೆ ಊರುಗಳಲ್ಲಿ ಯಾವ ಯಾವ ಯೋಜನೆಯಡಿ ಯಾವ ಯಾವ ರೀತಿಯ ಎಷ್ಟೆಷ್ಟು ಮನೆಗಳ ನಿರ್ಮಾಣ ಕಾರ್ಯಕ್ರಮವನ್ನು ಹಾಕಿಕೊಂಡಿದೆ. (ಪ್ರತಿ ಊರು ಹಾಗೂ ಯೋಜನೆಗೆ ಸಂಬಂಧಪಟ್ಟ ವಿವರಗಳನ್ನು ನೀಡುವುದು)?

ಆ) ಈ ಮನೆಗಳಿಗೆ ಸಾರ್ವಜನಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಯಾವ ಯಾವ ಯೋಜನೆಯ ಮನೆಗಳಿಗೆ ಎಷ್ಟೆಷ್ಟು ಠೇವಣಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಗಿದೆ. ಠೇವಣಿಗಳ ಒಟ್ಟು ಮೊತ್ತ ಎಷ್ಟು?